# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

## ಪ್ರಕರಣದ ಸಂಖ್ಯೆ:ಎಡಿಸ್ ಆರ್.ಇ.ವಿ.ಎಸ್.ಆರ್: 02/15-16

ದಿನಾಂಕ : 25-10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ

ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ವಾರಿಜ<br>ಕೋಂ ಜಿನ್ನಪ್ಪ ಗೌಡ<br>ಕೋರ್ಜಾಲು ದರ್ಖಾಸು ಮನೆ,<br>ಚಿಬಿದ್ರೆ ಗ್ರಾಮ,<br>ಬೆಳ್ತಂಗಡಿ ತಾಲೂಕು ದ.ಕ.<br>(ವಕೀಲರು ಶ್ರೀ ಶಿವಯ್ಯ ಎಸ್.ಎಲ್) | - ಮತ್ತು - | ತಹಶೀಲ್ದಾರರು<br>ಬೆಳ್ತಂಗಡಿ ತಾಲೂಕು ದ.ಕ. |

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49 ರ ಮೇರೆಗೆ ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ NCRCR: 267/98-99 ರಂತೆ ತಹಶೀಲ್ದಾರರು "ಕೃತಾವಳಿ ಇರುವುದಿಲ್ಲ" ಎಂದು ನೀಡಿದ ಹಿಂಬರಹ ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ ಸ.ನಂ. 10 ಮತ್ತು 13 ರ ಪೈಕಿ ವಿಸ್ತೀರ್ಣ 5.00 ಎಕ್ರೆ ಸರಕಾರಿ ಜಮೀನನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡು 1987 ರಿಂದಲೇ ಕೃಷಿ ಮಾಡಿಕೊಂಡು ಅದೇ ಜಾಗದಲ್ಲಿ ಮನೆಕಟ್ಟಿಕೊಂಡು ವಾಸ ಇರುವುದಾಗಿದೆ. ಈ ಸ್ಥಳದಲ್ಲಿ ತೆಂಗು, ಗೇರು, ರಬ್ಬರು ಮರಗಳು ಇದ್ದು ಇದರ ಉತ್ಪನ್ನದಿಂದಲೇ ಮೇಲ್ಮನವಿದಾರರು ತಮ್ಮ ಜೀವನ ನಡೆಸುತ್ತಿರುವುದಾಗಿದೆ, ಸುತ್ತಲು ಅಗಳು ಬೇಲಿ ಇದೆ. ಪಂಚಾಯತ್ ದಿಂದ ಡೋರ್ ನಂಬ್ರ ನೀಡಲಾಗಿದೆ. ಈ ಅಕ್ರಮಿತ ಜಮೀನಿನ ಸಕ್ರಮೀಕರಣಕ್ಕೆ ದಿನಾಂಕ: 28-04-1999 ರಂದು ನಮೂನೆ 53 ರಂತೆ ಅರ್ಜಿ ಸಲ್ಲಿಸಿದ್ದು, ಸದ್ರಿ ಅರ್ಜಿಯನ್ನು NCRCR: 267/98-99 ಎಂಬುದಾಗಿ ದಾಖಲಿಸಿಕೊಳ್ಳಲಾಗಿದೆ. ಈ ಅರ್ಜಿಯನ್ನು ವಿಲೇವಾರಿಗೆ ಬಾಕಿ ಇಟ್ಟಿದ್ದು, ಮೇಲ್ಮನವಿದಾರರು ಈ ಅರ್ಜಿಯ ಬಗ್ಗೆ ಅದರಲ್ಲಿನ ದಾಖಲೆಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿದಾಗ ತನ್ನ ಅರ್ಜಿಯನ್ನು ಕೃತವಾಳಿ ಇರುವುದಿಲ್ಲವೆಂದು ಕಾರಣ ನೀಡಿ ವಿಲೇಗೊಳಿಸಲಾಗಿದೆ ಎಂಬ ಹಿಂಬರಹದ ಪ್ರತಿ ನೀಡಿರುತ್ತಾರೆ. ಅರ್ಜಿಯನ್ನು ಮಂಜೂರು ಮಾಡದೆ ಈ ರೀತಿ ಹಿಂಬರಹ ನೀಡಿರುವುದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ

ವಿನಾಯಿತಿ ಬಗ್ಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 52 ಹಾಗೂ ಕಾಲಮಿತಿ ಅಧಿನಿಯಮದ ಕಲಂ 5 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 26-05-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಈ ದಿನ ವಿಚಾರಣೆ ಆರಂಭಿಸಿ ಯುಕ್ತ ಕಾಲವಕಾಶ ನೀಡಿ ದಿನಾಂಕ: 14-06-2016 ರಂದು ವಿಚಾರಣೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿಯ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಪ್ರತಿವಾದಿಯವರು ಸ್ಥಳಕ್ಕೆ ಬಾರದೆ ಏಕಪಕ್ಷೀಯವಾಗಿ ನಿರ್ಧರಿಸಿ ಅರ್ಜಿಯನ್ನು ತಳ್ಳಿ ಹಾಕಿರುತ್ತಾರೆ. ಇದರಿಂದ ಮೇಲ್ಮನವಿದಾರರಿಗೆ ತುಂಬಾ ತೊಂದರೆಯಾಗಿದೆ. ಅರ್ಜಿಯನ್ನು ಅಕ್ರಮ - ಸಕ್ರಮ ಸಮಿತಿಗೆ ಮಂಡಿಸಿಲ್ಲ. ಸ್ಥಳದಲ್ಲಿ ಹೇರಳ ಕೃಷಿ ಇರುತ್ತದೆ. ವಿಳಂಬ ವಿನಾಯಿತಿಗೆ ಸಲ್ಲಿಸಿದ ಅರ್ಜಿಯನ್ನು ಮನ್ನಿಸಲು ಕೋರಿರುತ್ತಾರೆ. ಹಾಗೂ ಈ ಮೇಲ್ಮನವಿಯನ್ನು ಪುರಸ್ಕರಿಸಿ ಮೇಲ್ಮನವಿದಾರರು ಅನಧಿಕೃತವಾಗಿ ಸ್ವಾಧೀನ ಹೊಂದಿರುವ ಜಮೀನನ್ನು ಮಾನ್ಯ ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರು ಅನಧಿಕೃತವಾಗಿ ಸರಕಾರಿ ಜಮೀನಿನಲ್ಲಿ ಹೇರಳ ಕೃತಾವಳಿಗಳನ್ನು ಮಾಡಿದ್ದು, ಪ್ರತಿವಾದಿಗಳು NCRCR: 267/98-99 ರಂತೆ ಸಲ್ಲಿಸಿದ ಅರ್ಜಿ ಬಗ್ಗೆ ನಿಯಮಾನುಸಾರ ತನಿಖೆ ನಡೆಸಿಲ್ಲವೆಂದು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಚಿಬಿದ್ರೆ ಗ್ರಾಮದ NCRCR: 267/98-99 ರಂತೆ ನೀಡಿದ ಹಿಂಬರಹವನ್ನು ರದ್ದುಪಡಿಸಿ ಆದೇಶಿಸಿದೆ.

ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ NCRCR: 267/98-99 ನಮೂನೆ 53 ನೇ ಅರ್ಜಿಯ ಕುರಿತು ನಿಯಮಾನುಸಾರ ತನಿಖೆ ನಡೆಸಿ, ವಿಲೇವಾರಿಗೆ ಸಮಿತಿ ಮುಂದೆ ಮಂಡಿಸಲು ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.
ಸಹಾಯಕ ಆಯುಕ್ತರು,
ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಶಿವಯ್ಯ ಎಸ್.ಎಲ್ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.